2016 ಕ.ತೀ.ವ 1434

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

ಶ್ರೀಮತಿ ಗೌರಮ್ಮ –ವಿರುದ್ಧ– ಶ್ರೀ ಲಕ್ಷ್ಮೀಕಾಂತಯ್ಯ*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಕ್ರಿಮಿನಲ್ ಅರ್ಜಿಯನ್ನು ದಾಖಲು ಮಾಡಲಾಗಿದೆ.

ಮಾನ್ಯ ಸೆಷನ್ಸ್ ನ್ಯಾಯಾಧೀಶರು ಮಾಡಿದ ಆದೇಶವನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಕೊರಟಗೆರೆ ಮ್ಯಾಜಿಸ್ಟ್ರೇಟರು ದಿನಾಂಕ 02.02.2007 9 ರಿಂದ ಮಾಸಿಕ 3,000/– ರೂಪಾಯಿಗಳಂತೆ, ಅರ್ಜಿದಾರರಿಗೆ ಜೀವನಾಂಶ ಸಂದಾಯ ಮಾಡುವಂತೆ ಪ್ರತ್ಯರ್ಜಿದಾರನಿಗೆ ನಿರ್ದೇಶಿಸಿದ್ದಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ದಾಖಲು ಮಾಡಲಾಗಿದೆ.

ಅರ್ಜಿದಾರರು, ಉಪಾಧ್ಯಾಯರಾಗಿದ್ದು ಮಾಸಿಕ 11,000/– ರೂಪಾಯಿಗಳಿಗಿಂತ ಹೆಚ್ಚು ವೇತನ ಆದಾಯ ಹೊಂದಿರುವುದಲ್ಲದೆ ಬಹಿರಂಗಪಡಿಸಿರದ ಕೃಷಿ ಆದಾಯವನ್ನು ಸಹಾ ಹೊಂದಿರುತ್ತಾರೆ ಮತ್ತು ದಿನಾಂಕ 4.11.1995ರಂದು ಕ್ರಿಮಿನಲ್ ಸಂಕೀರ್ಣ ಸಂಖ್ಯೆ 23/1994ರಲ್ಲಿ ಆದೇಶವನ್ನು ನೀಡಿದ ತರುವಾಯ ಸನ್ನಿವೇಶಗಳಲ್ಲಿ ಯಾವುದೇ ಬದಲಾವಣೆಯಾಗುವುದಕ್ಕೆ ಜೀವನಾಂಶ ನೀಡಲು ಯಾರೇ ಇತರ ಅವಲಂಬಿತರು ಇರುವುದಿಲ್ಲ. ಮಾನ್ಯ ಮ್ಯಾಜಿಸ್ಟ್ರೇಟರು, ಮಾಸಿಕ 3,000/– ರೂಪಾಯಿಗಳಿಗೆ ಜೀವನಾಂಶ ಮೊತ್ತ ಹೆಚ್ಚಿಸಿರುವುದು ನ್ಯಾಯಸಮ್ಮತವಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ಮಾನ್ಯ ಮ್ಯಾಜಿಸ್ಟ್ರೇಟರು ಮಾಡಿದ ಆದೇಶವು ನ್ಯಾಯಸಮ್ಮತವಾಗಿದ್ದು ಅದನ್ನು ಪೂರ್ವಸ್ಥಿತಿಗೆ ತರಲಾಗಿದೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ 1308/2012, ದಿನಾಂಕ: 7ನೇ ಜುಲೈ, 2015.

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. (1977) 7 ಎಸ್‌ಸಿಸಿ 7 ಜಸ್‌ಬೀರ್ ಕೌರ್ ಸೀಗಲ್ –ವಿರುದ್ಧ– ಜಿಲ್ಲಾ ನ್ಯಾಯಾಧೀಶರು ಡೆಹರಾಡೂನ್ ಮತ್ತು ಇತರರು* | *(ಉಲ್ಲೇ) 10* |
| *2. ಎಐಆರ್ 1968 ದೆಹಲಿ,174 ಚಂದ್ರ ಪ್ರಕಾಶ್ ಬಾದ್‌ರಾಜ್ –ವಿರುದ್ಧ– ಶೀಲಾ ರಾಣಿ ಚಂದ್ರ ಪ್ರಕಾಶ್* | *(ಉಲ್ಲೇ) 11* |

ಅರ್ಜಿದಾರರ ಪರ: ಶ್ರೀ ಕೆ.ವಿ. ನರಸಿಂಹನ್ ವಕೀಲರ ಪರವಾಗಿ ಶ್ರೀ ಕೆ.ಎನ್. ನಿತೀಶ್, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎ.ವಿ. ಗಂಗಾಧರಪ್ಪ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ:**

ಮಾನ್ಯ ಸೆಷನ್ಸ್ ನ್ಯಾಯಾಧೀಶರು ಮಾಡಿದ ಆದೇಶವನ್ನು ಈ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 397ನೇ ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರನಿಂದ ಸಲ್ಲಿಸಲಾದ ಪುನರೀಕ್ಷಣಾ ಅರ್ಜಿಯನ್ನು ಭಾಗಶಃ ಅಂಗೀಕರಿಸಿ ಕೊರಟಗೆರೆ ಮ್ಯಾಜಿಸ್ಟ್ರೇಟರು, ದಿನಾಂಕ 02–02–2009 ರಿಂದ ಮಾಸಿಕ 3,000/– ರೂಪಾಯಿಗಳಂತೆ, ಅರ್ಜಿದಾರರಿಗೆ ಜೀವನಾಂಶ ಸಂದಾಯ ಮಾಡುವಂತೆ ಪ್ರತ್ಯರ್ಜಿದಾರನಿಗೆ ನಿರ್ದೇಶಿಸಿದ್ದಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಈ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ದಾಖಲು ಮಾಡಲಾಗಿದೆ.

2. ಈ ಅರ್ಜಿಯು ತೀರ್ಮಾನಿಸುವುದಕ್ಕಾಗಿ ಹೇಳಬೇಕಾದ ಮುಖ್ಯ ಸಂಗತಿಗಳೆಂದರೆ ಅರ್ಜಿದಾರರು ಮತ್ತು ಆಕೆಯ ಮಗ, ಪ್ರತ್ಯರ್ಜಿದಾರನ ವಿರುದ್ಧ

ಕ್ರಿಮಿನಲ್ ಸಂಕೀರ್ಣ ಸಂ. 23/1994ನ್ನು ದಾಖಲು ಮಾಡಿದ್ದಾರೆ. ವಾದಿಸಿದ ತರುವಾಯ, ಈ ಅರ್ಜಿಯನ್ನು ದಿನಾಂಕ: 04–11–1995ರಂದು ಅಂಗೀಕರಿಸಲಾಗಿದೆ ಮತ್ತು ಅದರಲ್ಲಿರುವ ಪ್ರತಿಯೊಬ್ಬ ಅರ್ಜಿದಾರರು, ಮಾಸಿಕ 3,00/– ರೂಪಾಯಿಗಳಂತೆ ಜೀವನಾಂಶ ಸಂದಾಯಕ್ಕೆ ಹಕ್ಕುಳ್ಳವರಾಗಿರುತ್ತಾರೆಂದು ಅಭಿಪ್ರಾಯಪಡಲಾಗಿದೆ.

3. ಸುಮಾರು ಹತ್ತು ವರ್ಷಗಳು ಗತಿಸಿ ಹೋದ ತರುವಾಯ ಬದಲಾದ ಸಂದರ್ಭಗಳಲ್ಲಿನ ಹಿನ್ನೆಲೆಯಲ್ಲಿ ಮಾಸಿಕ 3,000/– ರೂಪಾಯಿಗಳಿಗೆ ಜೀವನಾಂಶ ಮೊತ್ತವನ್ನು ಹೆಚ್ಚಿಸುವುದಕ್ಕೆ ಮತ್ತು ಅದನ್ನು ಸಂದಾಯ ಮಾಡಲು ಪ್ರತ್ಯರ್ಜಿದಾರನಿಗೆ ನಿರ್ದೇಶಿಸುವಂತೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 127(1) ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರರಿಂದ ಕ್ರಿಮಿನಲ್ ಸಂಕೀರ್ಣ ಸಂ. 55/2006ನ್ನು ದಾಖಲು ಮಾಡಲಾಗಿದೆ. ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ವ್ಯವಹರಣೆಗಳ ಅವಧಿಯಲ್ಲಿ, ಅರ್ಜಿಯ ಬಗ್ಗೆ ದೃಢವಾಗಿ ವಾದಿಸಿದ್ದಾರೆ. ಪತ್ನಿ–ಅರ್ಜಿದಾರಳಾದ ಆಕೆ ತಾನಾಗಿಯೇ ವಿಚಾರಣೆಗೊಳಗಾಗಿದ್ದಾಳೆ ಮತ್ತು ಪ್ರತ್ಯರ್ಜಿದಾರರಾದ – ಪತಿಯು – ಸಹ ತಾನಾಗಿಯೇ ವಿಚಾರಣೆಗೆ ಒಳಗಾಗಿದ್ದಾರೆ. ಪ್ರತ್ಯರ್ಜಿದಾರನ ವೇತನ ಆದಾಯವು ಹೆಚ್ಚಾಗಿದೆಯೆಂಬುದನ್ನು ಮತ್ತು ಕ್ರಿಮಿನಲ್ ಸಂಕೀರ್ಣ ಸಂ. 23/1994 ರಲ್ಲಿನ ಆದೇಶದ ತರುವಾಯ ಈ ನಡುವಿನ ಅವಧಿಯಲ್ಲಿ ಜೀವನ ವೆಚ್ಚವು ಹೆಚ್ಚಾಗಿರುವುದನ್ನು ಮಾನ್ಯ ಮ್ಯಾಜಿಸ್ಟ್ರೇಟ್‌ರವರು ನಿರ್ಣಯಿಸಿದ್ದಾರೆ. ದಿನಾಂಕ 02–02–2009 ಆದೇಶವನ್ನು ಮಾಡಿದ ತರುವಾಯ ಪ್ರತ್ಯರ್ಜಿದಾರನ ಆದಾಯದ ಮೇಲೆ ಇತರರು ಅವಲಂಬಿಸಿರುವುದಿಲ್ಲ. ಹಾಗಾಗಿ ಅರ್ಜಿಯನ್ನು ಅಂಗೀಕರಿಸಲಾಗಿದೆ ಮತ್ತು ಮಾಸಿಕ 3,000/–ರೂಪಾಯಿಗಳ ದರದಲ್ಲಿ ಜೀವನಾಂಶ ಮೊತ್ತವನ್ನೂ ಸಂದಾಯ ಮಾಡಲು ಪ್ರತ್ಯರ್ಜಿದಾರನಿಗೆ ನಿರ್ದೇಶಿಸಲಾಗಿದೆಯೆಂದು ಮಾನ್ಯ ಮ್ಯಾಜಿಸ್ಟ್ರೇಟರು ನಿರ್ಣಯಿಸಿದ್ದಾರೆ.

4. ಸದರಿ ಆದೇಶವನ್ನು ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯು ದಾಖಲು ಮಾಡುವುದರ ಮೂಲಕ ಸೆಷನ್ಸ್ ನ್ಯಾಯಾಧೀಶರ ಮುಂದೆ ಪ್ರಶ್ನಿಸಲಾಗಿದೆ. ಈ

ಅಂಶಗಳು ಪರಿಗಣನೆಗಾಗಿ ಎತ್ತಲಾಗಿದೆ ಮತ್ತು ಉತ್ತರಿಸಲಾಗಿದೆ; (i) ಪ್ರತಿ ತಿಂಗಳೂ 300/– ರೂಪಾಯಿಗಳಿಂದ 3,000/– ರೂಪಾಯಿಗಳ ಮಾಸಿಕ ಜೀವನಾಂಶವನ್ನು ಹೆಚ್ಚಿಸುವುದಕ್ಕೆ ಅರ್ಜಿದಾರರು ಕಾರಣಗಳನ್ನು ನೀಡಿದ್ದಾರೆಯೇ? ಮತ್ತು (ii) ಯಾವ ಆದೇಶ? ಪುನರೀಕ್ಷಣಾ ಅರ್ಜಿಯನ್ನೂ, ಭಾಗಶಃ ಅಂಗೀಕರಿಸಲಾಗಿದ್ದು, ಪುನರೀಕ್ಷಣಾ ಅರ್ಜಿದಾರರ ಪರವಾಗಿ ಮಾನ್ಯ ವಕೀಲರಿಂದ ದಾಖಲು ಮಾಡಿದ ಲಿಖಿತ ವಾದಗಳನ್ನು ಅಂಗೀಕರಿಸುವುದರ ಮೂಲಕ ಮತ್ತು ಮಾಸಿಕ ಜೀವನಾಂಶ ಪಾವತಿಸುವುದು ಮಾಸಿಕ 1,000/– ರೂಪಾಯಿಗಳಿಗೆ ಇಳಿಸಲಾಗಿದೆ.

5. ಸೆಷನ್ಸ್ ನ್ಯಾಯಾಧೀಶರು, ಮಾಸಿಕ 1,000/– ರೂಪಾಯಿಗಳಿಗೆ ಜೀವನಾಂಶವನ್ನು ಕಡಿಮೆ ಮಾಡಿ ತಪ್ಪು ಮಾಡಿದ್ದಾರೆಯೆಂದು ಶ್ರೀ. ಕೆ.ಎನ್. ನಿತೀಶ್, ಮಾನ್ಯ ವಕೀಲರು ವಾದಿಸಿರುತ್ತಾರೆ. ಸೆಷನ್ಸ್ ನ್ಯಾಯಾಧೀಶರು, ಅರ್ಜಿದಾರರ ದುರ್ದೆಶೆಯನ್ನು ವಿವೇಚಿಸಲು ವಿಫಲರಾಗಿದ್ದಾರೆ ಮತ್ತು ಅಕಾರಣವಾದ ಆದೇಶದ ಮೂಲಕ, ಪುನರೀಕ್ಷಣಾ ಅರ್ಜಿಯು ಭಾಗಶಃ ಅಂಗೀಕರಿಸಿರುವುದು ಮತ್ತು ಸದರಿ ಆದೇಶವು, ಕಾನೂನು ಬಾಹಿರವಾಗಿದ್ದು, ರದ್ದುಪಡಿಸಲು ಹೊಣೆಯಾಗುತ್ತದೆಯೆಂದು ಅವರು ವಾದವನ್ನು ಮಂಡಿಸಿದ್ದಾರೆ.

6. ಮತ್ತೊಂದು ಕಡೆ, ಶ್ರೀ. ಎ.ವಿ. ಗಂಗಾಧರಪ್ಪ, ಮಾನ್ಯ ವಕೀಲರು, ಅರ್ಜಿದಾರರಾದ ಆಕೆಯು ಮಗನೊಂದಿಗೆ ವಾಸಿಸುತ್ತಿದ್ದು, ಈಗ ಆಕೆಯ ಮಗ ಉದ್ಯೋಗಿಯಾಗಿದ್ದಾರೆ ಮತ್ತು ಗಳಿಸುತ್ತಿದ್ದಾರೆ ಹಾಗಾಗಿ ಪ್ರತ್ಯರ್ಜಿದಾರನಿಂದ ಯಾವುದೇ ನೆರವಿನ ಅಗತ್ಯವಿರುವುದಿಲ್ಲವೆಂದು ವಾದಿಸಿದ್ದಾರೆ. ಪ್ರತ್ಯರ್ಜಿದಾರರು, ಉತ್ತಮ ಆರೋಗ್ಯವನ್ನಿಟ್ಟುಕೊಂಡಿರುವುದಿಲ್ಲ ಮತ್ತು ಈ ತಿಂಗಳ ಕೊನೆಯಲ್ಲಿ ಸೇವೆಯಿಂದ ನಿವೃತ್ತಿಯಾಗುತ್ತಿದ್ದಾರೆ ಮತ್ತು ಪ್ರಶ್ನಿತ ಆದೇಶದಲ್ಲಿ, ಹಸ್ತಕ್ಷೇಪ ಮಾಡಿದ್ದಲ್ಲಿ ತುಂಬಾ ಪರಿಸ್ಥಿತಿ ಕಷ್ಟವಾಗುತ್ತದೆಯೆಂದು ಅವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಹಾಗೆಯೇ ಅರ್ಜಿದಾರರಿಗೆ ಅನ್ಯಾಯವನ್ನು ಮಾಡಿರುವುದಿಲ್ಲ. ಈ ಅರ್ಜಿಯನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ

ದಾಖಲು ಮಾಡಿದ್ದನ್ನು, ಪುರಸ್ಕರಿಸಬಾರದೆಂದು ಮಾನ್ಯ ವಕೀಲರು ಮುಂದುವರೆದು ವಾದವನ್ನು ಮಂಡಿಸಿದ್ದಾರೆ.

7. ಮಾನ್ಯ ಮ್ಯಾಜಿಸ್ಟ್ರೇಟರು ಮಾಡಿದ ಆದೇಶವನ್ನು ಪರಿಶೀಲಿಸುವುದರಿಂದ, ಪತಿಯ ವೇತನ ಆದಾಯವು, ಕ್ರಿಮಿನಲ್ ಸಂಕೀರ್ಣ ಸಂ.23/1994ರಲ್ಲಿ ಆದೇಶ ದಿನಾಂಕ: 04–11–1995ನ್ನು ಮಾಡಿದ ತರುವಾಯ ಬಹುಮಟ್ಟಿಗೆ ಹೆಚ್ಚಾಗಿದೆ ಮತ್ತು ಕೃಷಿ ಆದಾಯ ಸಹ ಇದೆಯೆಂದು ಹಾಗೂ ಇತರೆ ಯಾರು ಅವಲಂಬಿತರು ಇಲ್ಲವೆಂಬ ಸಂಗತಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ ಎಂಬುದು ಸುಸ್ಪಷ್ಟವಾಗಿ ಕಂಡುಬರುತ್ತದೆ. ಹೆಚ್ಚಾದ ಜೀವನ ವೆಚ್ಚವನ್ನೂ ಸಹ ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಆದಾಗ್ಯೂ, ಸೆಷನ್ಸ್ ನ್ಯಾಯಾಧೀಶರು ಪತಿಗೆ ಸಹಾನುಭೂತಿ ತೋರಿಸುವುದರ ಮೂಲಕ ಮತ್ತು ಯಾವುದೇ ಸಮರ್ಥನೆಯಿಲ್ಲದೇ, ಪತಿಯ ವೇತನ ಆದಾಯದಲ್ಲಿ ಆಗಿರುವ ಹೆಚ್ಚಳದ ಬಗ್ಗೆ ಗಮನಿಸಿದೆ. 1,000/– ರೂಪಾಯಿಗಳಿಗೆ ಜೀವನಾಂಶ ಮೊತ್ತವನ್ನು ಇಳಿಕೆ ಮಾಡಿದ್ದಾರೆ.

8. ಜೀವನ ವೆಚ್ಚವನ್ನು ನೋಡಿದಾಗ ಮಾಸಿಕ 11,000/– ರೂಪಾಯಿಗಳಿಗಿಂತ ಹೆಚ್ಚು ವೇತನವನ್ನು ಗಳಿಸುತ್ತಿರುವ ಶಾಲಾ ಉಪಾಧ್ಯಾಯನ ಪತಿ ಮಾಸಿಕ 1,000/– ರೂಪಾಯಿಗಳ ಅತ್ಯಲ್ಪ ಮೊತ್ತದಿಂದ ಜೀವನ ನಿಭಾಯಿಸುವುದೆಂದರೆ ಅರ್ಜಿದಾರ ಮಹಿಳೆಯ ಸ್ಥಾನ ಮಾನವನ್ನೂ ಊಹಿಸುವುದು ಅಸಾಧ್ಯವಾದುದು. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 127ನೇ ಪ್ರಕರಣವನ್ನು ಓದಲಾದ 125ನೇ ಪ್ರಕರಣದ ಉದ್ದೇಶವನ್ನು ಸೆಷನ್ಸ್ ನ್ಯಾಯಾಧೀಶರು ದೃಷ್ಟಿಯಲ್ಲಿಟ್ಟುಕೊಂಡಿಲ್ಲ. ಅರ್ಜಿದಾರರು ಜೀವನಾಂಶ ಮತ್ತು ಹೆಚ್ಚಳವನ್ನು ಕ್ಲೇಮು ಮಾಡುವ ಹಕ್ಕಿನಂತೆ ಹೆಚ್ಚಳವು ಮಾಡಿದ್ದು, ಪ್ರತ್ಯರ್ಜಿದಾರನ ವೇತನ ಆದಾಯದಲ್ಲಿ ಪ್ರಮಾಣಾನುಸಾರ ಹೆಚ್ಚಳವಾದುದನ್ನು ದೃಷ್ಟಿಯಲ್ಲಿಟ್ಟುಕೊಂಡು, ಆಕೆ ಮದುವೆಯಾದ ಮನೆಯಲ್ಲಿ ಹೇಗೆ ವಾಸಿಸುತ್ತಿದ್ದಳೊ ಹಾಗೆ ಘನತೆಯಿಂದ ಬದುಕುವಂತಾಗಬೇಕು. ಪ್ರತ್ಯರ್ಜಿದಾರನು, ಉಪಾಧ್ಯಾಯ ಉದ್ಯೋಗದಲ್ಲಿದ್ದು ಜೀವನಾಂಶ ಸಂದಾಯ ಮಾಡುವುದಕ್ಕೆ ಸಾಕಷ್ಟು ಆದಾಯವಿದ್ದರೂ, ಅರ್ಜಿದಾರಳನ್ನು ಹೀನ ಪರಿಸ್ಥಿತಿಯಲ್ಲಿ ವಾಸಿಸಲು ಒತ್ತಾಯಿಸಲಾಗದು.

9. ಪತಿಯು ಆರೋಗ್ಯವಾಗಿದ್ದಲ್ಲಿ, ದೈಹಿಕವಾಗಿ ಶಕ್ತರಾಗಿದ್ದಲ್ಲಿ ಮತ್ತು ನೆರವು ನೀಡುವ ಸ್ಥಿತಿಯಲ್ಲಿದ್ದು, ತನ್ನ ಪೂರಕವಾದ ಕಾನೂನು ಬಾಧ್ಯತೆಯಿದ್ದು ಆಕೆಯು ಅದನ್ನು ಸ್ವೀಕರಿಸುವುದಕ್ಕೆ ಅರ್ಹವಾಗಿದ್ದಲ್ಲಿ ಎಂಬುವೆಲ್ಲ ಹಳಸಲು ಮಾತುಗಳಾಗಿವೆ.

10. ಜೀವನಾಂಶ ಪ್ರಮಾಣವನ್ನು ನಿರ್ಧರಿಸುವ ವಿಷಯದಲ್ಲಿ ***ಜಸ್‌ಬೀರ್ ಕೌರ್ ಸೀಗಲ್ –ವಿರುದ್ಧ– ಜಿಲ್ಲಾ ನ್ಯಾಯಾಧೀಶರು ಡೆಹರಾಡೂನ್ ಮತ್ತು ಇತರರು***[1], ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> ‘‘ನ್ಯಾಯಾಲಯವು, ಪಕ್ಷಕಾರರ ಸ್ಥಾನಮಾನವನ್ನು ಪರಿಗಣಿಸಿದ್ದು, ತಮ್ಮ ಸಂಬಂಧಪಟ್ಟ ಅಗತ್ಯತೆಗಳನ್ನು ಪರಿಗಣಿಸಿ ತನ್ನ ಸ್ವಂತ ಜೀವನ ನಿರ್ವಹಣೆಗಾಗಿ ತನ್ನ ಯುಕ್ತ ವೆಚ್ಚಗಳ ಹೊರತು ಸಂಬಂಧಪಟ್ಟಂತೆ ಪಾವತಿಸುವುದಕ್ಕೆ ಆತನ ಸಾಮರ್ಥ್ಯವನ್ನು ಮತ್ತು ಆತನು, ಈ ಕಾನೂನಿನ ಅಡಿಯಲ್ಲಿ ಪಾಲಿಸಬೇಕಾದುದು ಶಾಸನ ಬದ್ಧವಾಗಿರುವುದು, ಆದರೆ ಅದು ಅನೈಚ್ಛಿಕವಾಗಿ ಸಂದಾಯಗಳು ಮತ್ತು ಕಡಿತಗಳನ್ನು ಆಕೆಯ ಸ್ಥಾನಮಾನಗಳು ಮತ್ತು <u>ಆಕೆಯ ಜೀವನ ವಿಧಾನವನ್ನು ಪರಿಗಣಿಸಿ ಆಕೆಯು ಯುಕ್ತ ಸೌಕರ್ಯಗಳಲ್ಲಿ ವಾಸಿಸುತ್ತಿರುವಂತೆ ಮತ್ತು ತನ್ನ ಪತಿಯೊಂದಿಗೆ ಆಕೆಯು ವಾಸಿಸುತ್ತಿದ್ದಾಗ ಇರುತ್ತಿದ್ದಂತೆಯೇ ಹಾಗೂ ಆಕೆಯು, ತನ್ನ ಪ್ರಕರಣದ ಪ್ರಾಸಿಕ್ಯೂಷನಲ್ಲಿ ಅಸಮರ್ಥಳೆಂದು ಆಕೆ ಭಾವಿಸಿಕೊಳ್ಳದಂತೆ ಆಕೆಗೆ ಜೀವನಾಂಶ ಮೊತ್ತವನ್ನು ನಿಗದಿಪಡಿಸಬೇಕು. ಅದೇ ಸಮಯದಲ್ಲಿ, ಹಾಗೆ ನಿರ್ದಿಷ್ಟಪಡಿಸುವ ಮೊತ್ತವು ಅತಿಯಾದುದಾಗಲಿ ಅಥವಾ ದುಬಾರಿಯಾಗಿರಬಾರದು</u>.
>
> (ಒತ್ತು ನೀಡಲಾಗಿದೆ)

1. (1977) 7 ಎಸ್‌ಸಿಸಿ 7 ಸರ್ವೋಚ್ಚ ನ್ಯಾಯಾಲಯ

11. ಆತನು ಗಳಿಸುತ್ತಿರುವಾಗ ಅಥವಾ ಗಳಿಸುವ ಸಾಮರ್ಥ್ಯವಿರುವ ಅವಧಿಯವರೆಗೂ ಹಣಕಾಸಿನ ತೊಂದರೆಗಳಿವೆಯೆಂಬ ಕಾರಣದಿಂದ ತನ್ನ ಪತ್ನಿಯ ಜೀವನಾಂಶವನ್ನು ನೀಡುವುದಕ್ಕೆ ತಾನು ಅಸಮರ್ಥನಾಗಿರುವನೆಂದು ವಾದಿಸುವುದಕ್ಕೆ ಪತಿಗೆ ಅನುಮತಿ ನೀಡಲಾಗದು. ***ಚಂದ್ರ ಪ್ರಕಾಶ್ ಬಾದ್‌ರಾಜ್ –ವಿರುದ್ಧ– ಶೀಲಾ ರಾಣಿ ಚಂದ್ರಪ್ರಕಾಶ್***[2], ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ತನ್ನ ಪತ್ನಿ ಮತ್ತು ಮಗುವಿನ ಜೀವನಾಂಶಕ್ಕೆ ಯುಕ್ತವಾಗಿ ಸಮರ್ಥವಾಗಿರುವಂತೆ ಸಾಕಷ್ಟು ಹಣವನ್ನೂ ಗಳಿಸಿರುವ ಸಾಮರ್ಥ್ಯವಿರುವ ಸಶಕ್ತ ಯುವಕನಂತೆ ಪೂರ್ವಭಾವನೆ ಮಾಡಲಾಗಿದೆ ಮತ್ತು ಕುಟುಂಬದ ಜೀವನ ಮಟ್ಟಕ್ಕೆ ಅನುಗುಣವಾಗಿ ಅವರಿಗೆ ಜೀವನಾಂಶಕ್ಕೆ ಸಾಕಷ್ಟು ಸಾಮರ್ಥ್ಯವಿರುವಂತೆ ಗಳಿಸುವ ಸ್ಥಿತಿಯಲ್ಲಿಲ್ಲವೆಂದು ಹೇಳುವುದಕ್ಕೆ ಆತನನ್ನೂ ಸುನಾವಣೆ ಮಾಡಲಾಗದು. ತನ್ನ ಪತ್ನಿ ಮತ್ತು ಮಗುವಿನ ಜೀವನಾಂಶದ ತನ್ನ ಕಾನೂನು ಸಾಧ್ಯತೆಯನ್ನು ನಿರ್ವಹಿಸುವುದಕ್ಕೆ ಸಾಕಷ್ಟು ಗಳಿಸಿದ್ದು, ತನ್ನ ನಿಯಂತ್ರಣ ಮೀರಿದ ಕಾರಣಗಳಿಗಾಗಿ ಆತನು ಅಸಮರ್ಥನೆಂದು ಅಭಿಪ್ರಾಯಪಡುವುದಕ್ಕಾಗಿ ತರ್ಕಬದ್ಧ ಕಾರಣಗಳನ್ನೂ ಈ ನ್ಯಾಯಾಲಯಕ್ಕೆ ತೋರಿಸಿದ ಹಾಗೆ ಸಶಕ್ತ ದೇಹವುಳ್ಳ ವ್ಯಕ್ತಿಯಾಗಿದ್ದಾನೆ. ಪತಿಯು, ತನ್ನ ಆದಾಯದ ಖಚಿತ ಮೊತ್ತವನ್ನೂ ಈ ನ್ಯಾಯಾಲಯಕ್ಕೆ ಬಹಿರಂಗಪಡಿಸದೇ ಇರುವಾಗ ಪೂರ್ವಭಾವನೆಯಂತೆ ಆತನ ವಿರುದ್ಧ ಸುಲಭವಾಗಿ ಅನುಮತಿ ನೀಡಬಹುದು."

12. ಮ್ಯಾಜಿಸ್ಟ್ರೇಟರು, ದಾಖಲೆ ಮೇಲಿನ ಸಾಕ್ಷ್ಯದ ಯುಕ್ತ ವಿವೇಚನೆ ಮೇಲೆ ಆದೇಶವನ್ನು ಮಾಡಿದ್ದು, ಸೆಷನ್ಸ್ ನ್ಯಾಯಾಧೀಶರು, ಪುನರೀಕ್ಷಣಾ ಅಧಿಕಾರ

2. ಎಐಆರ್ 1968 ದೆಹಲಿ, 174

ವ್ಯಾಪ್ತಿಯಲ್ಲಿ, ಪ್ರಶ್ನಿತ ಆದೇಶವು ವ್ಯತಿರಿಕ್ತವಾಗಿದ್ದ ಹೊರತು ಐತೀರ್ಪು ಜೀವನಾಂಶ ಆದೇಶದೊಂದಿಗೆ ಹಸ್ತಕ್ಷೇಪ ಮಾಡುವಂತಿಲ್ಲ. ಮ್ಯಾಜಿಸ್ಟ್ರೇಟರು ಮಾಡಿದ ಆದೇಶವು ವ್ಯತಿರಿಕ್ತವಾಗಿದೆಯೆಂಬುದು ಪ್ರತ್ಯರ್ಜಿದಾರನ ಪ್ರಕರಣವಾಗಿರುವುದಿಲ್ಲ. ಅದೇ ವಿಷಯಕ್ಕೆ ಸೆಷನ್ಸ್ ನ್ಯಾಯಾಧೀಶರು ಸ್ಪಂದಿಸಿರುವ ರೀತಿಯು ಸಂಪೂರ್ಣವಾಗಿ ತಪ್ಪಾಗಿದ್ದು, ಮೇಲೆ ಉದ್ಧರಿಸಲಾದಂತೆ, ಪರಿಗಣನೆಗಾಗಿ ಅವರಿಂದ ಎತ್ತಲಾದ ಅಂಶಗಳಿಂದ ಅದು ಕಾಣಬರುತ್ತದೆ. ಸೆಷನ್ಸ್ ನ್ಯಾಯಾಧೀಶರು, ತಮ್ಮ ಮುಂದಿರುವ ವಿಷಯವನ್ನು ಅಪೀಲಿನಂತೆ ಪರಿಗಣಿಸಿದ್ದಾರೆ. ಆವಾಗಲೂ ಸಹಾ ಈ ಪ್ರಕರಣದ ದಾಖಲೆಯ ಗುಣಾವಗುಣಗಳನ್ನು ವಿವೇಚಿಸದೆ ಮತ್ತು ಮ್ಯಾಜಿಸ್ಟ್ರೇಟರಿಂದ ಮಾಡಿದ ಯಾವುದೇ ತಪ್ಪು ಇದ್ದಲ್ಲಿ, ಅದನ್ನು ಗುರುತಿಸದೆ ಆದೇಶವನ್ನು ನಿರಂಕುಶವಾಗಿ ಮಾರ್ಪಾಡಿಸಿದ್ದಾರೆ ಮತ್ತು ಜೀವನಾಂಶ ಮೊತ್ತವನ್ನೂ ಇಳಿಕೆ ಮಾಡಿದ್ದಾರೆ. ಸೆಷನ್ಸ್ ನ್ಯಾಯಾಧೀಶರ ಆದೇಶವು ಸಾಕ್ಷ್ಯದ ಯಾವುದೇ ಗುಣಾವಗುಣಗಳ ವಿವೇಚನೆಗಿಂತ ಹೆಚ್ಚು ಶಂಕೆಗಳು ಮತ್ತು ಕಲ್ಪನೆಗಳ ಮೇಲೆ ಆಧಾರಿತವಾಗಿದೆ. ಅಪೀಲು ನ್ಯಾಯಾಲಯವು, ಯಾವುದೇ ವಿಷಯದಲ್ಲಿ ಹಸ್ತಕ್ಷೇಪ ಮಾಡುವ ಮುಂಚೆ, ಅಧಿವಿಚಾರಣಾ ನ್ಯಾಯಾಲಯ ದಾಖಲಿಸಿದ ಸಾಕ್ಷ್ಯದ ಗುಣಾವಗುಣಗಳ ಆಧಾರದ ಮೇಲೆ ಯುಕ್ತ ಮತ್ತು ಉಚಿತ ನಿರ್ಣಯಗಳೊಂದಿಗೆ, ಎಚ್ಚರಿಕೆಯಿಂದ ಹಾಗೂ ವಿವೇಚನಾಯುಕ್ತವಾಗಿ ಪರಿಶೀಲಿಸಬೇಕಾಗುತ್ತದೆ ಮತ್ತು ಸಾವಕಾಶವಾಗಿ ಹಸ್ತಕ್ಷೇಪ ಮಾಡಬೇಕಾಗುತ್ತದೆ.

13. ಪುನರೀಕ್ಷಣಾ ಅಧಿಕಾರ ವ್ಯಾಪ್ತಿಯು, ಕಣ್ಣಿಗೆ ರಾಚುವಂಥ ಅಂಶವಿರುವಂತದ್ದು ನ್ಯಾಯಾಲಯದ ಗಮನಕ್ಕೆ ಬಂದಾಗ ನ್ಯಾಯ ವಿಫಲತೆಯನ್ನು ಸರಿಪಡಿಸುವುದಕ್ಕಾಗಿ ಚಲಾಯಿಸಲಾದ ಒಂದು ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯಾಗಿದೆ. ಸೆಷನ್ಸ್ ನ್ಯಾಯಾಧೀಶರ ಗಮನಕ್ಕೆ ಅಂಥ ಯಾವುದೇ ಅಂಶವನ್ನು ತರದೇ ಇರುವುದರಿಂದ, ಜೀವನಾಂಶವನ್ನು ಕಡಿಮೆ ಮಾಡಿದ ಆದೇಶವು ಕಾನೂನು ಬಾಹಿರವಾಗಿದ್ದು ಊರ್ಜಿತವಾಗುವುದಿಲ್ಲ.

14. ಅರ್ಜಿದಾರರು, ಉಪಾಧ್ಯಾಯರಾಗಿದ್ದು ಮಾಸಿಕ 11,000/- ರೂಪಾಯಿಗಳಿಗಿಂತ ಹೆಚ್ಚು ವೇತನ ಆದಾಯ ಹೊಂದಿರುವುದಲ್ಲದೆ ಬಹಿರಂಗಪಡಿಸಿರದ ಕೃಷಿ ಆದಾಯವನ್ನು ಸಹಾ ಹೊಂದಿರುತ್ತಾರೆ ಮತ್ತು

ದಿನಾಂಕ 4.11.1995ರಂದು ಕ್ರಿಮಿನಲ್ ಸಂಕೀರ್ಣ ಸಂಖ್ಯೆ 23/1994ರಲ್ಲಿ ಆದೇಶವನ್ನು ನಿಡಿದ ತರುವಾಯ ಸನ್ನಿವೇಶಗಳಲ್ಲಿ ಯಾವುದೇ ಬದಲಾವಣೆಯಾಗುವುದಕ್ಕೆ ಜೀವನಾಂಶ ನೀಡಲು ಯಾರೇ ಇತರ ಅವಲಂಬಿತರು ಇರುವುದಿಲ್ಲ. ಮಾನ್ಯ ಮ್ಯಾಜಿಸ್ಟ್ರೇಟರು, ಮಾಸಿಕ 3,000/– ರೂಪಾಯಿಗಳಿಗೆ ಜೀವನಾಂಶ ಮೊತ್ತ ಹೆಚ್ಚಿಸಿರುವುದು ನ್ಯಾಯಸಮ್ಮತವಾಗಿದೆ.

ಈ ಕಾರಣದಿಂದ, ಅರ್ಜಿಯನ್ನು ಅಂಗೀಕರಿಸಲಾಗಿದೆ ಮತ್ತು ಅಧ್ಯಕ್ಷಾಧಿಕಾರಿಗಳು, ಎಫ್‌ಟಿಸಿ – ವಿರುದ್ಧ – ಮಧುಗಿರಿ, ಇವರಿಂದ ಕ್ರಿಮಿನಲ್ ಆರ್.ಪಿ. ಸಂಖ್ಯೆ: 47/2009 ರಲ್ಲಿ ದಿನಾಂಕ 30.10.2010ರಂದು ನೀಡಿದ ಆದೇಶವನ್ನು ರದ್ದುಪಡಿಸಲಾಗಿದೆ. ತತ್ಪರಿಣಾಮವಾಗಿ, ಕ್ರಿಮಿನಲ್ ಸಂಕೀರ್ಣ ಸಂಖ್ಯೆ 55/2006, ದಿನಾಂಕ 02.02.2009 ರಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ಮಾಡಿದ ಆದೇಶವು ನ್ಯಾಯಸಮ್ಮತವಾಗಿದ್ದು ಅದನ್ನು ಪೂರ್ವ ಸ್ಥಿತಿಗೆ ತರಲಾಗಿದೆ.

ಮೂರು ತಿಂಗಳುಗಳ ಸಮಯದಲ್ಲಿ ಸಮಾನ ಕಂತುಗಳಲ್ಲಿ ಬಾಕಿಯನ್ನೂ ಸಂದಾಯ ಮಾಡುವುದಕ್ಕಾಗಿ ಅನುಮತಿಸಲಾಗಿದೆ.